ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ – ೧೭**

**ಒಟ್ಟು ಪ್ರಶ್ನೆಗಳು – ೫೯**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಮಂಗಳವಾರ, ದಿನಾಂಕ : ೧೫ನೇ ಜುಲೈ, ೨೦೧೪**

---

## ಸಮೂಹ – II

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

F-1 B/B

## ಸ್ಥಳೀಯ ಸಂಸ್ಥೆಗಳು ಹಮ್ಮಿಕೊಂಡ ಯೋಜನೆಗಳು

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೪೯ (೧೩೧೬) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳ ಯಾವ ಯಾವ ತಾಲ್ಲೂಕುಗಳ ಪುರಸಭೆ, ಪಟ್ಟಣ, ಪಂಚಾಯತ್ ಹಾಗೂ ನಗರಸಭೆಗಳಲ್ಲಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ ; ಇದಕ್ಕೆ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು ;

(ಆ) ಈ ಮಂಜೂರಾದ ಹಣದಿಂದ ಯಾವ ಯಾವ ಯೋಜನೆಗಳ ಅಡಿಯಲ್ಲಿ ಕಾಮಗಾರಿ ಪ್ರಾರಂಭವಾಗಿದೆ ;

(ಇ) ಹಾಗಿದ್ದಲ್ಲಿ, ಕಾಮಗಾರಿಗಳು ಯಾವ ಯಾವ ಹಂತದಲ್ಲಿವೆ ?

## ರಾಜ್ಯ ಸಹಕಾರ ತೋಟಗಾರಿಕೆ ಮಾರಾಟ ಮಹಾ ಮಂಡಳಿ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೫೦ (೧೩೧೮) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕೆ ಮಾರಾಟ ಮಹಾ ಮಂಡಳಿಯ ಉದ್ದೇಶಗಳೇನು ;

(ಆ) ಮಹಾ ಮಂಡಳದ ಕಾರ್ಯ ಚಟುವಟಿಕೆಗಳ ವಿವರಗಳೇನು ಮತ್ತು ಮಹಾಮಂಡಳಕ್ಕೆ ವಿವಿಧ ಯೋಜನೆಗಳಡಿ ಬಿಡುಗಡೆಯಾಗಿರುವ ಅನುದಾನ ಎಷ್ಟು ;

(ಇ) ಬಿಡುಗಡೆಯಾಗಿರುವ ಅನುದಾನಗಳಲ್ಲಿ ಇದುವರೆಗೂ ಖರ್ಚಾಗಿರುವ ಮೊತ್ತ ಎಷ್ಟು ; ಬಿಡುಗಡೆಯಾದ ಅನುದಾನ ಖರ್ಚಾಗದೇ ಉಳಿಯಲು ಕಾರಣಗಳೇನು ; ಈ ಸಮಸ್ಯೆಗೆ ಕೈಗೊಂಡ ಕ್ರಮಗಳೇನು ?

## ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೦೫೧ (೧೩೧೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಷ್ಟ್ರೀಯ ಹೆದ್ದಾರಿ ಪುಣೆ–ಬೆಂಗಳೂರು ಹೆದ್ದಾರಿಯ ಮಧ್ಯದಲ್ಲಿರುವ ಹುಬ್ಬಳ್ಳಿ-ಧಾರವಾಡ ನಗರಗಳ ಮಧ್ಯೆ ಇರುವ ಬೈಪಾಸ್ ರಸ್ತೆಯನ್ನು ಚತುಷ್ಪಥ ರಸ್ತೆಯ ಪ್ರಸ್ತಾವನೆಯನ್ನು ಸಲ್ಲಿಸಲು ಮೆ. ನಂದಿ ಹೈವೆ ಡೆವಲಪರ್ಸ್, ಬೆಂಗಳೂರು ಇವರಿಗೆ ಸೂಚಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಕಂಪನಿಯುವರು ಪ್ರಸ್ತಾವನೆಯುನ್ನು ಸಲ್ಲಿಸಿರುವರೇ ;

(ಇ) ಒಂದು ವೇಳೆ ಪ್ರಸ್ತಾವನೆ ಸಲ್ಲಿಸದೆ ಇದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮವೇನು ;

(ಈ) ಈ ರಸ್ತೆಯಲ್ಲಿ ಅತೀ ಹೆಚ್ಚು ವಾಹನ ಸಂಚಾರ ಇರುವುದರಿಂದ ಇಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಹನಿ ನೀರಾವರಿ ಯೋಜನೆ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೫೨ (೧೩೫೭) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿನ ತೋಟಗಾರಿಕಾ ಬೆಳೆಗಳಿಗೆ ಹನಿ ನೀರಾವರಿ ಯೋಜನೆಯಡಿ ರೈತರಿಗೆ ಶೇಕಡಾ ೯೦ ರಷ್ಟು ಸಹಾಯಧನ ಹೆಚ್ಚಿಸಿರುವುದು ನಿಜವೇ ; ಹಾಗಿದ್ದಲ್ಲಿ, ಈಗಾಗಲೇ ಕಳೆದ ಸಾಲಿನಲ್ಲಿ ರೈತರಿಗೆ ನೀಡಿರುವ ಸಹಾಯಧನ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ರೈತರಿಗೆ ಇನ್ನು ಸಂದಾಯ ಮಾಡದೇ ಇರುವ ಸಹಾಯಧನ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ಒಂದು ವೇಳೆ ಸಹಾಯಧನ ಬಿಡುಗಡೆಗೆ ವಿಳಂಬವಾಗಿದ್ದರೆ ಅದನ್ನು ರೈತರ ಖಾತೆಗಳಿಗೆ ಯಾವಾಗ ಸಂದಾಯ ಮಾಡಲಾಗುವುದು ?

## ಸೋಲಾರ್ ಪಾರ್ಕ್‌ಗಳ ಸ್ಥಾಪನೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೦೫೩ (೧೩೨೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ತೀವ್ರತರವಾದ ವಿದ್ಯುತ್ ಅಭಾವದ ಹಿನ್ನೆಲೆಯಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಪ್ರತಿ ಜಿಲ್ಲೆಯಲ್ಲಿ ಸೋಲಾರ್ ಪಾರ್ಕ್‌ಗಳನ್ನು ಸ್ಥಾಪಿಸಿ ವಿದ್ಯುಚ್ಛಕ್ತಿ ಉತ್ಪಾದಿಸುವ ಯೋಜನೆಗಳನ್ನು ಸರ್ಕಾರ ಹಮ್ಮಿಕೊಂಡಿದೆಯೇ ; ಹಾಗಿದ್ದಲ್ಲಿ, ತತ್ಸಂಬಂಧ ಸರ್ಕಾರವು ರೂಪಿಸಿರುವ ಯೋಜನೆಗಳ ಬಗ್ಗೆ ವಿವರ ಒದಗಿಸುವುದು ;

(ಇ) ಇವುಗಳ ಅನುಷ್ಠಾನಕ್ಕೆ ಅಂದಾಜಿಸಿದ ವೆಚ್ಚ ಹಾಗೂ ಅದನ್ನು ಯಾವ ಮೂಲದಿಂದ ಭರಿಸುವ ಬಗ್ಗೆ ಪ್ರಯತ್ನ ಮಾಡಲಾಗಿದೆ (ವಿವರಗಳನ್ನು ಒದಗಿಸುವುದು) ?

## ಕೃಷಿ ಮಾರುಕಟ್ಟೆಗಳ ಮೂಲ ಸೌಲಭ್ಯಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೧೦೫೪ (೧೩೨೦) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿನ ಕೃಷಿ ಮಾರುಕಟ್ಟೆಗಳ ಸಂಖ್ಯೆ ಎಷ್ಟು (ವರ್ಗವಾರು ವಿವರ ನೀಡುವುದು) ;

(ಆ) ಅತೀ ಹೆಚ್ಚು ಆರ್ಥಿಕ ಸಂಪನ್ಮೂಲವನ್ನು ಕ್ರೋಢಿಕರಿಸುವ ಕೃಷಿ ಮಾರುಕಟ್ಟೆ ಯಾವುದು ;

(ಇ) ಈ ಕೃಷಿ ಮಾರುಕಟ್ಟೆಗಳಿಂದ ರೈತರಿಗೆ ದೊರಕುತ್ತಿರುವ ಸೇವೆಗಳು ಹಾಗೂ ರೈತರಿಗೆ ನೀಡುತ್ತಿರುವ ಮೂಲ ಸೌಲಭ್ಯಗಳ ವಿವರ ನೀಡುವುದು (ಕೃಷಿ ಮಾರುಕಟ್ಟೆವಾರು ವಿವರ ನೀಡುವುದು) ?

## ರಾಜ್ಯ ಹೆದ್ದಾರಿಯಲ್ಲಿನ ತಿರುವುಗಳು ಮತ್ತು ಅಪಘಾತಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೦೫೫ (೧೩೨೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಂತಾಮಣಿಯಿಂದ ಮದನಪಲ್ಲಿಯುವರೆಗಿನ ರಾಜ್ಯದ ಹೆದ್ದಾರಿಯಲ್ಲಿರುವ ಒಟ್ಟು ತಿರುವುಗಳೆಷ್ಟು ;

(ಆ) ಈ ತಿರುವುಗಳಲ್ಲಿ ನಿರಂತರವಾಗಿ ವಾಹನ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ರಸ್ತೆಯನ್ನು ತಿರುವು ರಹಿತ ರಸ್ತೆಯನ್ನಾಗಿ ಮಾಡಲು ಇಲಾಖೆ ಕೈಗೊಂಡಿರುವ ಕ್ರಮಗಳೇನು ?

## ಕೃಷಿ ಮಾರುಕಟ್ಟೆಗಳಿಂದ ಕೃಷಿ ಚಟುವಟಿಕೆಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೦೫೬ (೧೩೨೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಮಾರುಕಟ್ಟೆ ಇಲಾಖೆಯಿಂದ ಕೃಷಿ ಚಟುವಟಿಕೆಗಳಿಗೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮೀಸಲಿಟ್ಟಿರುವ ಹಣವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಈ ಹಣವನ್ನು ವಿನಿಯೋಗಿಸಲು ಇಲಾಖೆ ರೂಪಿಸಿರುವ ನಿಯಮಗಳೇನು ?

## ವಕ್ಫ್ ಮಂಡಳಿಯಿಂದ ನೀಡಲಾದ ಅನುದಾನ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೫೭ (೧೩೨೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೨ ವರ್ಷಗಳಲ್ಲಿ ವಕ್ಫ್ ಮಂಡಳಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಿಗೆ ನೀಡಲಾದ ಅನುದಾನದ ಮೊತ್ತವೆಷ್ಟು (ಜಿಲ್ಲಾವಾರು ವಿವರ ಒದಗಿಸುವುದು) ;

(ಆ) ಈ ಅವಧಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯಿಂದ ಅನುದಾನವನ್ನು ಕೋರಿ ಬಂದಿದ್ದ ಪ್ರಸ್ತಾವನೆ ಸಂಖ್ಯೆ ಎಷ್ಟು ; ಎಷ್ಟು ಪ್ರಸ್ತಾವನೆಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ;

(ಇ) ಪ್ರಸಕ್ತ ಸಾಲಿನಲ್ಲಿ ವಕ್ಫ್ ಮಂಡಳಿಯಿಂದ ಅನುದಾನವನ್ನು ಕೋರಿ ಚಿಕ್ಕಮಗಳೂರು ಜಿಲ್ಲೆಯ ವಿವಿಧ ಮತ ಕ್ಷೇತ್ರಗಳಿಂದ ಎಷ್ಟು ಪ್ರಸ್ತಾವನೆಗಳು ಬಂದಿವೆ ;

(ಈ) ಇವುಗಳ ಪೈಕಿ ಎಷ್ಟಕ್ಕೆ ಮಂಜೂರಾತಿ ನೀಡಲಾಗಿದೆ ಹಾಗೂ ಎಷ್ಟು ಹಣವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ ; ಇನ್ನೂ ಎಷ್ಟು ಪ್ರಸ್ತಾವನೆಗಳು ಬಾಕಿ ಇವೆ (ವಿಧಾನ ಸಭಾ ಕ್ಷೇತ್ರವಾರು ವಿವರ ಒದಗಿಸುವುದು) ?

## ಯಶಸ್ವಿನಿ ಯೋಜನೆಯ ವಿಸ್ತರಣೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೮ (೧೩೨೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಶಸ್ವಿನಿ ಯೋಜನೆಯ ಸೌಲಭ್ಯಗಳೇನು ; ಸೌಲಭ್ಯಗಳಿಂದ ನಗರವಾಸಿಗಳು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸಹಕಾರ ಸಂಘಗಳ ಸದಸ್ಯರುಗಳಲ್ಲದೇ ಇತರೆ ನಗರವಾಸಿಗಳಿಗೂ ಸದರಿ ಯೋಜನೆಯನ್ನು ವಿಸ್ತರಿಸಲಾಗುವುದೇ ;

(ಇ) ಸದರಿ ಯೋಜನೆಯನ್ನು ಎಲ್ಲಾ ಸರ್ಕಾರದ ಮತ್ತು ಅನುದಾನಿತ ಸಂಸ್ಥೆಗಳ ನಿವೃತ್ತ ನೌಕರರಿಗೂ ವಿಸ್ತರಿಸಲಾಗುವುದೇ ;

(ಈ) ಸದರಿ ಯೋಜನೆಯನ್ನು ಸರ್ಕಾರದ ಮತ್ತು ಅನುದಾನಿತ ಸಂಸ್ಥೆಗಳ ಸಣ್ಣ ನೌಕರರಿಗೂ ವಿಸ್ತರಿಸುವ ಉದ್ದೇಶ ಹೊಂದಲಾಗಿದೆಯೇ ?

## ಕೃಷಿ ವಿಶ್ವ ವಿದ್ಯಾನಿಲಯ ಸ್ಥಾಪನೆ

**ಶ್ರೀ ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೯ (೧೩೨೯) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪಿಸಬೇಕಾಗಿರುವ ಕೃಷಿ ವಿಶ್ವ ವಿದ್ಯಾನಿಲಯಕ್ಕೆ ಸ್ಥಳವನ್ನು ಎಲ್ಲಿ ಮತ್ತು ಎಷ್ಟು ವಿಸ್ತೀರ್ಣ ಕಾಯ್ದಿರಿಸಲಾಗಿದೆ (ವಿವರಗಳೊಂದಿಗೆ) ;

(ಆ) ಕಟ್ಟಡ ಕಾಮಗಾರಿ ಪ್ರಾರಂಭ ಮಾಡಲು ಸರ್ಕಾರದ ಮುಂದಿರುವ ಪ್ರಸ್ತಾವನೆಗಳೇನು ?

## ಕರ್ನಾಟಕದ ವಕ್ಫ್ ಬೋರ್ಡ್

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೬೦ (೧೩೩೧) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ವಕ್ಫ್ ಬೋರ್ಡ್‌ಗೆ ಸಂಬಂಧಿಸಿದ ಆಸ್ತಿ ಎಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ವಕ್ಫ್ ಬೋರ್ಡ್ ಜಾಗದ ಆರ್.ಟಿ.ಸಿ. ಇ.ಸಿ. ದಾಖಲೆಗಳನ್ನು ಒದಗಿಸುವುದು ;

(ಇ) ವಕ್ಫ್ ಬೋರ್ಡ್ ಜಾಗದಲ್ಲಿ ವಾಣಿಜ್ಯ ಕಟ್ಟಡಕ್ಕೆ ಬಳಸಿದ ಜಮೀನೆಷ್ಟು; ಅದರ ಲೀಸ್ ಅವಧಿ ಎಷ್ಟು ?

## ರೈತರಿಗೆ ಸೇವಾ ಸಹಕಾರಿ ಸಂಘಗಳ ಮೂಲಕ ಬಡ್ಡಿ ರಹಿತ ಸಾಲ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೬೧ (೧೩೩೬) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ಸೇವಾ ಸಹಕಾರಿ ಸಂಘಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ಎಷ್ಟು ರೈತರಿಗೆ ಸಾಲ ಮಂಜೂರು ಮಾಡಿದೆ ;

LAQ-1

ಹಾವೇರಿ ಜಿಲ್ಲೆಯಲ್ಲಿ ತಾಲ್ಲೂಕುವಾರು ಎಷ್ಟು ರೈತರಿಗೆ ರೂ. ೨೫,೦೦೦/- ದಿಂದ ರೂ. ೩,೦೦,೦೦೦/- ದವರೆಗೆ ಸಾಲ ನೀಡಲಾಗಿದೆ; ಇನ್ನೂ ಎಷ್ಟು ರೈತರ ಕೋರಿಕೆ ಬಾಕಿ ಉಳಿದಿದೆ (ಸಂಪೂರ್ಣ ಮಾಹಿತಿ ನೀಡುವುದು) ;

(ಆ) ಈ ಸಾರಿ ಬರಗಾಲ ತೀವ್ರವಾಗಿ ಕಾಡುತ್ತಿರುವ ಮುನ್ಸೂಚನೆ ಇರುವುದರಿಂದ ಈ ಹಿಂದೆ ಸಾಲ ಪಡೆದ ರೈತರ ಸಾಲ ಮನ್ನಾ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ ;

(ಇ) ಕೈಗೊಂಡಿದ್ದರೆ, ಸಾಲ ಪಡೆದ ಪ್ರತಿ ರೈತರ ಸಾಲ ಮನ್ನಾ ಮಾಡುವ ಮೊತ್ತವೆಷ್ಟು ?

## ಕೃಷಿ ಮಾರುಕಟ್ಟೆಯಿಂದ ರೈತರಿಗಿರುವ ಯೋಜನೆಗಳು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೬೨ (೧೩೩೭) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೃಷಿ ಮಾರುಕಟ್ಟೆಯ ವತಿಯಿಂದ ರಾಜ್ಯದ ಸಣ್ಣ ಅತೀ ಸಣ್ಣ ಮತ್ತು ದೊಡ್ಡ ರೈತರಿಗೆ ಇರುವ ವಿವಿಧ ಯೋಜನೆಗಳಡಿ ಒದಗಿಸಿರುವ ಸವಲತ್ತುಗಳು ಯಾವುವು ;

(ಆ) ಈ ಇಲಾಖೆಯಿಂದ ಕೃಷಿ ಕಾರ್ಮಿಕರಿಗೆ ಇರುವ ಮತ್ತು ದೊರೆಯುವ ಸೌಲತ್ತುಗಳು ಯಾವುವು ;

(ಇ) ಹಾವೇರಿ ಜಿಲ್ಲೆಯಲ್ಲಿ ಈ ಸೌಲಭ್ಯ ಪಡೆದ ರೈತರುಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ?

## ರಾಷ್ಟ್ರೀಯ ಹೆದ್ದಾರಿ ೪ರಲ್ಲಿ ಸಂಭವಿಸಿದ ಗಂಭೀರತೆಯ ಅಪಘಾತಗಳು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೬೩ (೧೩೩೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಷ್ಟ್ರೀಯ ಹೆದ್ದಾರಿ ೪ ತಡಸ್ ಕ್ರಾಸ್ (ಶಿಗ್ಗಾಂವ್ ತಾಲ್ಲೂಕುದಿಂದ ಸವಣೂರು ತಾಲ್ಲೂಕು ವರದಾನದಿ) ಕುಣಿಮೆಳ್ಳಹಳ್ಳಿವರೆಗೆ ನಾಲ್ಕು ಪಥದ ರಸ್ತೆ ಆದಾಗಿನಿಂದ ಇಲ್ಲಿಯವರೆಗೆ ಎಷ್ಟು ಅಪಘಾತಗಳು ಆಗಿವೆ ;

(ಆ) ಇದರಲ್ಲಿ ಸತ್ತವರ ಸಂಖ್ಯೆ ಎಷ್ಟು ; ದುಡಿತಕ್ಕೆ ಬಾರದವರ ಸಂಖ್ಯೆ ಎಷ್ಟು (ಸಂಪೂರ್ಣ ಅಂಗವಿಕಲತೆ ಹೊಂದಿದವರು) ;

(ಇ) ಈ ಅಪಘಾತಗಳಲ್ಲಿ ಸತ್ತ ದನಕರುಗಳ ಸಂಖ್ಯೆ ಎಷ್ಟು ; ಸತ್ತದನಕರುಗಳ ಮಾಲೀಕರಿಗೆ ಪರಿಹಾರ ಒದಗಿಸಲಾಗಿದೆಯೇ ?

## ಸರ್ಕಾರಿ ವಸತಿ ಗೃಹ ಹಂಚಿಕೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೬೪ (೧೩೩೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರಿ ವಸತಿ ಗೃಹ ಹಂಚಿಕೆ ಸಂಬಂಧ ಅನುಸರಿಸಲಾಗುತ್ತಿರುವ ಮಾನದಂಡಗಳೇನು ;

(ಆ) ವಸತಿ ಗೃಹ ಹಂಚಿಕೆ ಕೋರಿ ಎರಡು ಭಾರಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ;

(ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ನೌಕರರ ಜ್ಯೇಷ್ಠತೆಯನುಸಾರ ವಸತಿ ಗೃಹವನ್ನು ಹಂಚಿಕೆ ಮಾಡಲಾಗುತ್ತಿದೆಯೇ ; ಈವರೆಗೆ ಎಷ್ಟು ಕ್ರಮ ಸಂಖ್ಯೆಗಳವರೆಗೆ ಹಂಚಿಕೆ ಮಾಡಲಾಗಿದೆ ;

(ಈ) ನಿಯಮ ೮ರ ಅಡಿ ಸರ್ಕಾರಿ ವಸತಿ ಗೃಹ ಹಂಚಿಕೆಯಾದವರಿಗೆ ತದನಂತರದಲ್ಲಿ ಕ್ರಮಬದ್ಧಗೊಳಿಸಲು ನಿಯಮಾವಳಿಯಲ್ಲಿ ಅವಕಾಶವಿದೆಯೇ ; ಇದ್ದಲ್ಲಿ, ಕ್ರಮಬದ್ಧಗೊಳಿಸಲು ಅನುಕೂಲ ಮಾಡಿಕೊಡಲಾಗುತ್ತಿದೆಯೇ ?

## ಪೌರಾಡಳಿತ ಜನ ಪ್ರತಿನಿಧಿಗಳಿಗೆ ಗೌರವಧನ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೬೫ (೧೩೪೦) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗ್ರಾಮಾಡಳಿತ ಜನಪ್ರತಿನಿಧಿಗಳಂತೆ ಪೌರಾಡಳಿತದಲ್ಲಿ ಕಾರ್ಯನಿರ್ವಹಿಸುತ್ತಿರುವ ಜನಪ್ರತಿನಿಧಿಗಳಿಗೆ ಗೌರವಧನ/ಸಿಟಿಂಗ್ ಫೀಜ್ ದುಪ್ಪಟ್ಟು ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಯಾವಾಗ ಆದೇಶ ಮಾಡಲಾಗುವುದು (ವಿವರ ನೀಡುವುದು) ;

(ಇ) ಪೌರಾಡಳಿತ ಸಂಸ್ಥೆಗಳ ಆಡಳಿತದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಗ್ರಾಮಸಭೆ ಮಾದರಿಯಲ್ಲಿ ವಾರ್ಡ್‌ಸಭೆ ಮಾಡಿ ಸಾರ್ವಜನಿಕ ಸಹಭಾಗಿತ್ವ ನೀಡಲು ಸರ್ಕಾರ ಯೋಚಿಸಿದೆಯೇ ;

(ಈ) ಯೋಚಿಸಿದ್ದರೆ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು) ?

## ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೬೬ (೧೩೪೧) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಭಾಗ್ಯಜ್ಯೋತಿ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದ ಫಲಾನುಭವಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು, ಜಿಲ್ಲಾವಾರು ಪೂರ್ಣ ವಿವರ ನೀಡುವುದು) ;

(ಆ) ಬಡವರ ಮನೆಯ ಭಾಗ್ಯಜ್ಯೋತಿ ಒದಗಿಸುವ ವಿದ್ಯುತ್ತನ್ನು ನಾಲ್ಕು ದೀಪಗಳಿಗೆ ವಿಸ್ತರಿಸುವ ಯೋಜನೆಯನ್ನು ಸರ್ಕಾರ ಕೈಗೊಳ್ಳಲಿದೆಯೇ ;

(ಇ) ಪ್ರತಿ ಭಾಗ್ಯಜ್ಯೋತಿ ಯೋಜನೆಯಡಿ ವಿದ್ಯುತ್ ಒದಗಿಸುವ ಮನೆಗೆ ವಿಧಿಸುವ ಮೊತ್ತವೆಷ್ಟು ;

(ಈ) ಸದರಿ ಹಣ ವಿದ್ಯುತ್ ಸಂಪರ್ಕಕ್ಕೆ ಕಡಿಮೆ ಎಂದೆನಿಸುವುದಿಲ್ಲವೇ ; ಈ ಹಣವನ್ನು ಹೆಚ್ಚಿಸಲು ಸರ್ಕಾರದ ನಿರ್ಧಾರವೇನು (ವಿವರ ನೀಡುವುದು) ?

## ತುಂಬೆ ನೀರಾ ಘಟಕದ ಯೋಜನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೬೭ (೧೩೪೨) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಜಿಲ್ಲೆಯ ತುಂಬೆಯಲ್ಲಿರುವ ತೆಂಗಿನ ತೋಟದಿಂದ ನೀರಾ ಇಳಿಸುವ ನೀರಾ ಉತ್ಪಾದನಾ ಘಟಕದ ಯೋಜನಾ ವೆಚ್ಚವೆಷ್ಟು ;

(ಆ) ಸದರಿ ಘಟಕದಿಂದ ಉತ್ಪಾದಿಸುವ ನೀರಾವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆಯೇ ;

(ಇ) ನೀರಾ ಘಟಕದಿಂದ ಸ್ಥಳೀಯ ಸೇಂದಿ ತೆಗೆಯುವ ಮೂರ್ತಿದಾರರಿಗಾಗುವ ಲಾಭವೇನು ;

(ಈ) ಒಟ್ಟಾರೆ ತುಂಬೆ ನೀರಾ ಘಟಕದ ಯೋಜನೆ ಮತ್ತು ಯೋಜನೆಗಳೇನು ?

## ರೈತರಿಗೆ ನೀಡಿದ ಸಾಲದ ಮೇಲಿನ ಶೂನ್ಯ ಬಡ್ಡಿ ದರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೬೮ (೧೩೩೯) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಕೊಟ್ಟ ಸಾಲ ಮತ್ತು ಶೇ ೩ ಬಡ್ಡಿ ದರದಲ್ಲಿ ನೀಡಿದ ಸಾಲ ಇದರ ವ್ಯತ್ಯಾಸದ ಬಡ್ಡಿಯನ್ನು

ಇದುವರೆಗೆ ರಾಜ್ಯ ಸರ್ಕಾರ ಸಹಕಾರಿ ಸಂಘಗಳಿಗೆ ಬಾಕಿ ನೀಡಬೇಕಾದ ಮೊತ್ತವೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು, ಸಂಸ್ಥೆವಾರು ವಿವರ ನೀಡುವುದು) ;

(ಆ) ಬಾಕಿ ಮೊತ್ತವನ್ನು ಸರ್ಕಾರ ಯಾವಾಗ ಸಹಕಾರಿ ಸಂಘಗಳಿಗೆ ಬಿಡುಗಡೆ ಮಾಡಲಾಗುವುದು (ವಿವರ ನೀಡುವುದು) ;

(ಇ) ವ್ಯತ್ಯಾಸದ ಬಡ್ಡಿ ಮೊತ್ತ ಪಾವತಿಗೆ ವಿಳಂಬ ಮಾಡಿದ್ದಲ್ಲಿ, ಸಹಕಾರ ಸಂಘಗಳಿಗೆ ಆಡಳಿತಾತ್ಮಕ ಸಮಸ್ಯೆ ಬರುವುದನ್ನು ಸರ್ಕಾರ ಗಮನಿಸಿದೆಯೇ ; ಈ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು) ?

## ರೈತರ ಜಮೀನಿನ ಪರಿವೀಕ್ಷಣೆ

**ಶ್ರೀ ಜಿ. ಎಸ್.ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತ ರಾದವರು) :-**

೧೦೬೯ (೧೩೪೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೃಷಿ ಅಧಿಕಾರಿಗಳು ಅಥವಾ ಗ್ರಾಮಸೇವಕರುಗಳು ಇತ್ತೀಚಿನ ದಿನಗಳಲ್ಲಿ ರೈತರ ಜಮೀನುಗಳಿಗೆ ಭೇಟಿ ಕೊಡುವುದಾಗಲಿ, ಮಾರ್ಗದರ್ಶನ ನೀಡುವುದಾಗಲಿ, ಬಹಳ ವಿರಳವಾದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಇದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ?

## ಹನಿ ನೀರಾವರಿಗೆ ನೀಡುವ ಸಬ್ಸಿಡಿ

**ಶ್ರೀ ಜಿ.ಎಸ್.ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೭೦ (೧೩೪೩) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹನಿ ನೀರಾವರಿಗೆ ಸರ್ಕಾರ ನೀಡುತ್ತಿರುವ ಸಹಾಯಧನದಲ್ಲಿ (ಸಬ್ಸಿಡಿ) ಕೇಂದ್ರ ಸರ್ಕಾರದ ಪ್ರಮಾಣ ಎಷ್ಟು ಮತ್ತು ರಾಜ್ಯ ಸರ್ಕಾರದ ಪ್ರಮಾಣ ಎಷ್ಟು ;

(ಆ) ೨೦೧೩-೧೪ನೇ ಸಾಲಿನಲ್ಲಿ ರೈತರಿಗೆ ನೀಡಬೇಕಾದ ಸಹಾಯಧನವನ್ನು ಪೂರ್ತಿಯಾಗಿ ನೀಡಲಾಗಿದೆಯೇ ;

(ಇ) ಇದೇ ಸಾಲಿನಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಸಬ್ಸಿಡಿ ಹಣ ಪೂರ್ತಿ ಬಂದಿದೆಯೇ ; ಬಂದಿದ್ದರೆ, ಇನ್ನು ಎಷ್ಟು ಬಾಕಿ ಉಳಿದಿದೆ ;

(ಈ) ರೈತರಿಗೆ ರಿಯಾಯಿತಿ ನೀಡುವಾಗ ರಾಜ್ಯದ ಸಹಾಯಧನ ಮತ್ತು ಕೇಂದ್ರದ ಸಹಾಯಧನ ಒಟ್ಟಿಗೆ ಕೊಡಲಾಗುವುದೇ ಅಥವಾ ಪ್ರತ್ಯೇಕವಾಗಿ ಕೊಡಲಾಗುವುದೇ ?

## ಕೃಷಿ ಸಂಪರ್ಕ ಕೇಂದ್ರಗಳು

**ಶ್ರೀ ಜಿ.ಎಸ್.ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೭೧ (೧೩೪೫) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೃಷಿ ಸಂಪರ್ಕ ಕೇಂದ್ರಗಳು ರಾಜ್ಯದಲ್ಲಿ ರಿಯಾಯಿತಿ ದರದಲ್ಲಿ ಬೀಜ, ಗೊಬ್ಬರ ಹಾಗೂ ಕ್ರಿಮಿನಾಶಕ, ಕೃಷಿ ಉಪಕರಣಗಳನ್ನು

ಮಾರಾಟ ಮಾಡುವ ಕೇಂದ್ರಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಖಾಸಗಿ ವ್ಯಾಪಾರಸ್ಥರು ಮಾರಾಟ ಮಾಡುವ ಬೀಜ, ಗೊಬ್ಬರ ಹಾಗೂ ಕ್ರಿಮಿನಾಶಕಗಳ ಗುಣಮಟ್ಟ ಮತ್ತು ಅವುಗಳ ಅವಧಿ ಮೀರಿದ ಮತ್ತು ಅನಧಿಕೃತ ಕಂಪನಿಗಳ ಉತ್ಪಾದನೆಗಳನ್ನು ರೈತರಿಗೆ ಮಾರಾಟ ಮಾಡುವುದನ್ನು ನಿಯಂತ್ರಿಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು; ಇಲ್ಲಿಯವರೆಗೆ ತಪ್ಪಿತಸ್ಥರ ವಿರುದ್ಧ ಎಷ್ಟು ಕೇಸ್‌ಗಳನ್ನು ದಾಖಲಿಸಲಾಗಿದೆ ? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

## ರೈತರ ಪಂಪ್‌ಸೆಟ್‌ಗಳಿಗೆ ರಿಯಾಯಿತಿ ದರದಲ್ಲಿ ಸೋಲಾರ್ ವಿದ್ಯುತ್

**ಶ್ರೀ ಜಿ. ಎಸ್.ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತ ರಾದವರು) :–**

೧೦೭೨ (೧೩೪೪) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರಿಗೆ ರಿಯಾಯಿತಿ ದರದಲ್ಲಿ ಕೃಷಿ ಉಪಕರಣಗಳನ್ನು ನೀಡುವಂತೆ ಸೋಲಾರ್ ವಿದ್ಯುತ್ ಚಾಲಿತ ಐ.ಪಿ ಸೆಟ್‌ಗಳನ್ನು ರಿಯಾಯಿತಿ ದರದಲ್ಲಿ ಪೂರೈಸುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಇದ್ದರೆ, ಎಷ್ಟು ಅಶ್ವಶಕ್ತಿಯವರೆಗೆ ರಿಯಾಯಿತಿ ದರದಲ್ಲಿ ಐ.ಪಿ ಸೆಟ್‌ಗಳನ್ನು ನೀಡಲಾಗುವುದು; ರಿಯಾಯಿತಿ ಪ್ರಮಾಣವೆಷ್ಟು; ಅದಕ್ಕೆ ಇರುವ ಮಾನದಂಡಗಳೇನು ;

(ಇ) ಈ ಯೋಜನೆಯ ಅಡಿ ಬಿಜಾಪುರ–ಬಾಗಲಕೋಟೆ ಜಿಲ್ಲೆಗಳಲ್ಲಿ ಎಷ್ಟು ರೈತರಿಗೆ ನೀಡಲಾಗಿದೆ (ವಿವರ ನೀಡುವುದು) ?

## ಅಧಿಕ ಟೋಲ್‌ಗಳ ಸಂಖ್ಯೆ ವಾಹನ ಸವಾರರಿಗೆ ಅಧಿಕ ವೆಚ್ಚ

**ಶ್ರೀ ಎಂ. ಶ್ರೀನಿವಾಸ್(ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೦೭೩ (೧೩೪೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ರಸ್ತುತ ಇರುವ ಟೋಲ್‌ಗಳ ಸಂಖ್ಯೆ ಎಷ್ಟು ; ಯಾವ ಯಾವ ಭಾಗದಲ್ಲಿ ಈ ಟೋಲ್‌ಗಳನ್ನು ನಿರ್ಮಿಸಿ, ಶುಲ್ಕ ವಸೂಲು ಮಾಡಲಾಗುತ್ತಿದೆ ; (ಪ್ರತ್ಯೇಕ ವಿವರ ಒದಗಿಸುವುದು)

(ಆ) ಪ್ರಸ್ತುತ ಇರುವ ಟೋಲ್‌ಗಳ ಜೊತೆಗೆ ಮತ್ತಷ್ಟು ಟೋಲ್‌ಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ; ಹಾಗಿದ್ದಲ್ಲಿ, ನಿರ್ಮಾಣವಾಗುತ್ತಿರುವ ಅಂತಹ ರಸ್ತೆಗಳು, ನಿರ್ಮಿಸುತ್ತಿರುವ ಸಂಸ್ಥೆ ಯೋಜನಾ ವೆಚ್ಚ, ಮತ್ತು ಸ್ಥಾಪನೆಯಾಗುವ ಟೋಲ್‌ಗಳು ಯಾವುವು ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಟೋಲ್‌ಗಳ ಸಂಖ್ಯೆ ದಿನಕ್ರಮೇಣ ಹೆಚ್ಚುತ್ತಿದ್ದು, ನಗರ ಪ್ರವೇಶಿಸುವ ಮತ್ತು ರಾಜ್ಯದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಂಪರ್ಕ ಕಲ್ಪಿಸುವ ಈ ರಸ್ತೆಗಳು ವಾಹನ ಸವಾರರಿಗೆ ದುಬಾರಿಯಾಗಿ ಪರಿಣಮಿಸುತ್ತಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಟೋಲ್‌ಗಳ ಸಂಖ್ಯೆ ಕಡಿಮೆ ಮಾಡುವ ಮತ್ತು ಶುಲ್ಕವನ್ನು ಇಳಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳು ಏನು (ಮಾಹಿತಿ ಒದಗಿಸುವುದು) ?

# ರೈತರಿಗೆ ನಕಲಿ ಬೀಜ ಪೂರೈಕೆ

**ಶ್ರೀ ಎಂ. ಶ್ರೀನಿವಾಸ್(ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೦೭೪ (೧೩೪೯) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ರೈತರಿಗೆ ಮಾರಾಟ ಮಾಡುವ ಸಲುವಾಗಿ ಅನುಮತಿ ಪಡೆದ ಬೀಜ ಕಂಪನಿಗಳು ಯಾವುವು ; ಯಾವ ಯಾವ ಬೆಳೆಗಳ ದೃಷ್ಟಿಯಿಂದ ಅನುಮತಿಸಲಾಗಿದೆ ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ನಕಲಿ ಬೀಜ ಪೂರೈಕೆ ಮಾಡಿ ರೈತರಿಗೆ ವಂಚಿಸಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅಂತಹ ಕಂಪನಿಗಳ ವಿವರ, ಇದರಿಂದಾಗಿ ರೈತರಿಗೆ ಆಗಿರುವ ಅಂದಾಜು ನಷ್ಟ ಮತ್ತು ಇದಕ್ಕೆ ಕಾರಣವಾದ ಕಂಪನಿಗಳ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ಪೂರ್ಣ ವಿವರ ಒದಗಿಸುವುದು ;

(ಇ) ರೈತರಿಗೆ ಸಕಾಲದಲ್ಲಿ ಬೀಜ ಪೂರೈಕೆ ಮಾಡುವ ಮತ್ತು ಪೂರೈಕೆಯಲ್ಲಿನ ಗುಣಮಟ್ಟ ಮತ್ತು ಬೆಲೆ ನಿಗದಿಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಮುಂಜಾಗರೂಕತಾ ಕ್ರಮಗಳು ಯಾವುವು (ಸಂಪೂರ್ಣ ಮಾಹಿತಿ ಒದಗಿಸುವುದು) ?

## ಹನಿ ನೀರಾವರಿ ಫಲಾನುಭವಿಗಳು

**ಶ್ರೀ ನಾರಾಯಣಸಾ. ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೭೫ (೧೩೫೦) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ–ಬಿಜಾಪುರ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ಹನಿ ನೀರಾವರಿ ಫಲಾನುಭವಿಗಳ ಸಂಖ್ಯೆ ಎಷ್ಟು ;

(ಆ) ಎಷ್ಟು ಫಲಾನುಭವಿಗಳಿಗೆ ಸಹಾಯ ಧನ ದೊರಕಿದೆ ;

(ಇ) ಇನ್ನೂ ಎಷ್ಟು ಫಲಾನುಭವಿಗಳಿಗೆ ಸಹಾಯ ಧನ ದೊರಕಬೇಕಾಗಿರುತ್ತದೆ; ಈ ವಿಳಂಬಕ್ಕೆ ಕಾರಣಗಳೇನು; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ (ಮಾಹಿತಿ ನೀಡುವುದು)?

## ಹನಿ ನೀರಾವರಿ ಫಲಾನುಭವಿಗಳು

**ಶ್ರೀ ನಾರಾಯಣಸಾ. ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೭೬ (೧೩೫೧) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ–ಬಿಜಾಪುರ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಹನಿ ನೀರಾವರಿ ಫಲಾನುಭವಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಎಷ್ಟು ಫಲಾನುಭವಿಗಳಿಗೆ ಸಹಾಯ ಧನ ದೊರಕಿದೆ ;

(ಇ) ಇನ್ನೂ ಎಷ್ಟು ಫಲಾನುಭವಿಗಳಿಗೆ ಸಹಾಯ ಧನ ದೊರಕಬೇಕಾಗಿರುತ್ತದೆ ; ಈ ವಿಳಂಬಕ್ಕೆ ಕಾರಣಗಳೇನು ; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ (ಮಾಹಿತಿ ನೀಡುವುದು)?

## ಗೃಹ ನಿರ್ಮಾಣ ಸಹಕಾರ ಸಂಘಗಳ ಮೇಲೆ ಆದಾಯ ತೆರಿಗೆ ಅಧಿಕಾರಿಗಳ ದಾಳಿ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೭೭ (೧೩೫೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗೃಹ ನಿರ್ಮಾಣ ಸಹಕಾರ ಸಂಘ/ಸೊಸೈಟಿಗಳ ಮೇಲೆ ಆದಾಯ ತೆರಿಗೆ ಅಧಿಕಾರಿಗಳು ದಾಳಿ ನಡೆಸಿರುವುದು ನಿಜವೇ ;

(ಆ) ನಿಜವಾಗಿದ್ದರೆ, ದಾಳಿಗೆ ಒಳಪಟ್ಟ ಸಂಘ/ಸೊಸೈಟಿಗಳ ಸಂಖ್ಯೆ ಎಷ್ಟು ; (ಪೂರ್ಣ ವಿವರ ಒದಗಿಸುವುದು)

(ಇ) ದಾಳಿ ನಡೆಸಿದ ನಂತರದ ಫಲಿತಾಂಶವೇನು (ವಿವರ ಒದಗಿಸುವುದು) ?

## ಸಹಕಾರಿ ಸಂಘಗಳಿಂದ ಸಾಲ ನೀಡುವ ಯೋಜನೆಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೭೮ (೧೩೬೨) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸಹಕಾರ ಸಂಘಗಳ ಮೂಲಕ ಸಂಘದ ಸದಸ್ಯರುಗಳಿಗೆ ಬಡ್ಡಿರಹಿತ ಸಾಲ ನೀಡುವ ಯೋಜನೆ ಯಾವಾಗಿನಿಂದ ಅನುಷ್ಠಾನಕ್ಕೆ ಬಂದಿದೆ ; ಕಳೆದ ಒಂದು ವರ್ಷದ ವಿವರಗಳನ್ನು ಜಿಲ್ಲಾವಾರು ನೀಡುವುದು ;

(ಆ) ಎಷ್ಟು ಮೊತ್ತವನ್ನು ಇದಕ್ಕಾಗಿ ನೀಡಲಾಗಿದೆ; ಎಷ್ಟು ಜನ ರಾಜ್ಯದ ರೈತರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ ; ಇದನ್ನು ಪ್ರಸಕ್ತ ಹಣಕಾಸು ವರ್ಷಕ್ಕೂ ವಿಸ್ತರಿಸಲು ನಿರ್ಧರಿಸಲಾಗಿದೆಯೇ ; ಈಗ ರಾಜ್ಯದ ಎಷ್ಟು ಲಕ್ಷ ರೈತರಿಗೆ ಎಷ್ಟು ಕೋಟಿ ಮೊತ್ತದ ಸಾಲ ಒದಗಿಸುವ ಗುರಿ ಹೊಂದಲಾಗಿದೆ ;

(ಇ) ಇಂತಹ ಸಹಕಾರ ಸಂಘಗಳ ಸಾಲ ಸೌಲಭ್ಯಗಳು ಪ್ರಭಾವವಿರುವ ಅಥವಾ ಸೀಮಿತವಾಗಿ ಕೆಲವರಿಗಷ್ಟೇ ಆದ್ಯತೆ ಎನ್ನುವ ಅಪವಾದದ ಬಗ್ಗೆ ಸರ್ಕಾರದ ನಿಲವೇನು ; ಈ ಬಗ್ಗೆ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ ;

(ಈ) ಇದನ್ನು ತಪ್ಪಿಸಲು ಹೊಸ ರೈತರನ್ನು ಗುರುತಿಸುವ ಕಾರ್ಯ ನಡೆದಿದೆಯೇ ; ಸಾಲ ವಿತರಣೆ ಮೊತ್ತ ಹಾಗೂ ಫಲಾನುಭವಿಗಳ ಸಂಖ್ಯೆ ಹೆಚ್ಚಳದಿಂದಾಗಿ ರಾಜ್ಯ ಸರ್ಕಾರಕ್ಕೆ ಎಷ್ಟು ಕೋಟಿ ಮೊತ್ತದ ಹೊರೆ ಬೀಳಲಿದೆ ;

(ಉ) ಸಾಲಮಿತಿಯನ್ನು ಜಾಸ್ತಿ ಮಾಡುವುದರಿಂದ ದೊಡ್ಡ ಭೂ ಹಿಡುವಳಿದಾರರಿಗಷ್ಟೇ ಇದರ ಲಾಭವಾಗಲಿದೆ ಎಂಬುದು ಹಾಗೂ ಸಣ್ಣ ರೈತರಿಗೆ ಈ ಪ್ರಯೋಜನ ಸಿಗುತ್ತಿಲ್ಲವೆಂಬ ಅಲ್ಲದೇ ಬಡ್ಡಿರಹಿತವೆಂಬ ಕಾರಣಕ್ಕೆ ರೈತರು ಸಹಕಾರ ಸಂಘಗಳಿಂದ ಸಾಲ ಪಡೆದು ಬ್ಯಾಂಕ್‌ಗಳಲ್ಲಿ ಠೇವಣಿ ಇಡುತ್ತಿರುವ ಬಗ್ಗೆ ಸರ್ಕಾರದ ನಿಲುವು ಸ್ಪಷ್ಟಪಡಿಸುವುದು ; ಇಂತಹ ಪ್ರಕರಣಗಳು ರಾಜ್ಯದಲ್ಲಿ ಬೆಳಕಿಗೆ ಬಂದಿವೆಯೇ (ಜಿಲ್ಲಾವಾರು ವಿವರ ನೀಡುವುದು) ?

## ಜೈವಿಕ ಅನಿಲದ ಮೂಲಕ ವಿದ್ಯುತ್ ಉತ್ಪಾದನೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೭೯ (೧೩೬೧) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮಹಾನಗರಗಳಲ್ಲಿ ಉತ್ಪತ್ತಿಯಾಗುವ ಹಸಿತ್ಯಾಜ್ಯದಿಂದ ಜೈವಿಕ ಅನಿಲ ವಿದ್ಯುತ್ ಘಟಕ ಸ್ಥಾಪಿಸಲು ಸರ್ಕಾರ ಮುಂದಾಗಿದೆಯೇ ;

(ಆ) ಯಾವ ಯಾವ ಮಹಾನಗರಗಳಲ್ಲಿ ಈ ಯೋಜನೆ ರೂಪಿಸಲಾಗಿದೆ; ಎಷ್ಟು ಟನ್ ತ್ಯಾಜ್ಯವನ್ನು ಬಳಸಿ ಎಷ್ಟು ಪ್ರಮಾಣದ ಜೈವಿಕ ಅನಿಲದ ಮೂಲಕ ಎಷ್ಟು ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಬಹುದಾಗಿದೆ ; ಇದಕ್ಕಾಗಿ ಗುರುತಿಸಿರುವ ನಗರ ಪಾಲಿಕೆಗಳು ಯಾವುವು ; ಬೆಂಗಳೂರು ಮಹಾನಗರದ ಯಾವ ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ ;

(ಇ) ಸದರಿ ಘಟಕಗಳ ಸ್ಥಾಪನೆಗೆ ಖರ್ಚಾಗುವ ಮೊತ್ತವೆಷ್ಟು; ಯಾವ ಕಂಪನಿಗಳಿಗೆ ಇದರ ಉಸ್ತುವಾರಿಯನ್ನು ವಹಿಸಲಾಗಿದೆ ; ಇಂತಹ ಘಟಕ ಸ್ಥಾಪನೆಗೆ ಅನುಸರಿಸುವ ಮಾರ್ಗಸೂಚಿಗಳೇನು; ಎಷ್ಟು ಟನ್ ಘನತ್ಯಾಜ್ಯ ಹಾಗೂ ಹಸಿ ತ್ಯಾಜ್ಯ ಲಭ್ಯವಾಗುತ್ತದೆ ;

(ಈ) ನಗರದಲ್ಲಿ ಯಾವ ಯಾವ ಪ್ರದೇಶಗಳಲ್ಲಿ ಘಟಕ ಸ್ಥಾಪಿಸಲು ನಿರ್ಧರಿಸಲಾಗಿದೆ ; ಈ ಘಟಕಗಳ ಕಾಮಗಾರಿ ಯಾವ ಹಂತದಲ್ಲಿದೆ ;

(ಉ) ಈ ಘಟಕಗಳಿಂದ ಉತ್ಪಾದನೆಯಾಗುವ ವಿದ್ಯುತ್ ತಯಾರಿಕೆಗೆ ಖರ್ಚಾಗುವ ಮೊತ್ತವೆಷ್ಟು ; ಇಲ್ಲಿ ಉತ್ಪಾದನೆಗೊಳ್ಳುವ ವಿದ್ಯುತ್‌ನ್ನು ಯಾವ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುತ್ತದೆ ; ಇದರಿಂದ ಪಾಲಿಕೆಗೆ ಲಭ್ಯವಾಗುವ ಲಾಭ ಎಷ್ಟು (ತಿಳಿಸುವುದು) ?

## ರಾಷ್ಟ್ರೀಯ ಹೆದ್ದಾರಿಗಳ ಸುಧಾರಣೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತ ರಾದವರು) :-**

೧೦೮೦ (೧೩೬೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಹಾಲಿ ರಾಷ್ಟ್ರೀಯ ಹೆದ್ದಾರಿಗಳ್ಯಾವುವು ; ಇವುಗಳನ್ನು ಉನ್ನತ್ತೀಕರಿಸುವ, ವಿಸ್ತರಣೆ ಮಾಡುವ ಸುಧಾರಣೆ ಹಾಗೂ ನಿರ್ವಹಣೆ ಜವಾಬ್ದಾರಿ ಯಾವ ಇಲಾಖೆ ವಶದಲ್ಲಿದೆ ; ಇದು ಯಾರ ನಿಯಂತ್ರಣದಲ್ಲಿರುತ್ತದೆ ;

(ಆ) ಕಳೆದ ಒಂದು ವರ್ಷದ ಅವಧಿಯಲ್ಲಿ ಸದರಿ ರಸ್ತೆಗಳ ಪೈಕಿ ಎಷ್ಟು ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ, ಸುಧಾರಣೆ ಕಾಮಗಾರಿ ಕೈಗೊಳ್ಳಲಾಗಿದೆ ; ಇದರಲ್ಲಿ ರಾಜ್ಯ ಸರ್ಕಾರದ ಪಾತ್ರಗಳೇನು ; (ತಿಳಿಸುವುದು)

(ಇ) ಅದೇ ರೀತಿ ಹಾಲಿ ಇರುವ ರಾಷ್ಟ್ರೀಯ ಹೆದ್ದಾರಿಗಳನ್ನು ಪುನಃ ಮುಂದುವರೆದು ವಿಸ್ತರಿಸುವ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆಯೇ ; ಇದಕ್ಕಾಗಿ ಗುರುತಿಸಿರುವ ರಸ್ತೆ ಮಾರ್ಗಗಳ್ಯಾವುವು ; ಅವುಗಳು ಕ್ರಮಿಸುವ ದೂರ ಎಲ್ಲಿಂದ ಎಲ್ಲಿಗೆ ವಿವರಗಳನ್ನು ನೀಡುವುದು ;

(ಈ) ಪ್ರಸ್ತುತ ರಾಷ್ಟ್ರೀಯ ಹೆದ್ದಾರಿಗಳ ಜೊತೆಗೆ ಹೊಸದಾಗಿ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಗುರುತಿಸಿದ ಮಾರ್ಗಗಳು ಯಾವುವು ;

(ಉ) ಈ ಪೈಕಿ ಆರುಪಥದ ಹಾಗೂ ನಾಲ್ಕುಪಥದ ರಸ್ತೆ ಮಾರ್ಗಗಳ್ಯಾವುವು ; ಹೊಸದಾಗಿ ಘೋಷಣೆಯಾದ ಮಾರ್ಗಗಳ ರಸ್ತೆ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ ; ಸದರಿ ಉದ್ದೇಶಕ್ಕೆ ಖರ್ಚಾದ ಮೊತ್ತದ ವಿವರಗಳನ್ನು ರಾಷ್ಟ್ರೀಯ ಹೆದ್ದಾರಿವಾರು ಮಾಹಿತಿ ನೀಡುವುದು ;

(ಊ) ರಾಷ್ಟ್ರೀಯ ಹೆದ್ದಾರಿಗಳಾಗಿ ಘೋಷಣೆಗೊಂಡು ೪-೫ ವರ್ಷ ಕಳೆದರೂ ಪ್ರಗತಿ ಕುಂಠಿತವಾಗಿರುವ ಬಗ್ಗೆ ಸರ್ಕಾರದ ನಿಲುವೇನು ಸ್ಪಷ್ಟಪಡಿಸುವುದು ; ಹಾಗೆಯೇ ರಾಷ್ಟ್ರೀಯ ಹೆದ್ದಾರಿ-೯ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೂಡಲೇ ಯಾವ ಕ್ರಮ ಕೈಗೊಳ್ಳಲಾಗುವುದು ?

## ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೮೧ (೧೩೮೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಕ್ಕೆ ಪ್ರತಿ ದಿನ ಅಗತ್ಯವಿರುವ ವಿದ್ಯುತ್ತಿನ ಪ್ರಮಾಣವೆಷ್ಟು ; ಈ ಪೈಕಿ ರಾಜ್ಯದಲ್ಲಿ ಈಗ ವಿವಿಧ ಮೂಲಗಳಿಂದ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು ;

(ಆ) ಪ್ರತಿ ದಿನ ಖಾಸಗಿ ಸಂಸ್ಥೆಗಳಿಂದ ಖರೀದಿ ಮಾಡುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು ; ಯೂನಿಟ್ಟಿಗೆ ಎಷ್ಟು ದರವನ್ನು ನೀಡಿ ಖರೀದಿಸಲಾಗುತ್ತಿದೆ ; (ಪೂರ್ಣ ವಿವರಗಳನ್ನು ಮತ್ತು ವಿದ್ಯುತ್ ಮಾರಾಟ ಮಾಡುತ್ತಿರುವ ಸಂಸ್ಥೆಗಳ ಹೆಸರು ವಿವರಗಳ ಮಾಹಿತಿಯನ್ನು ಒದಗಿಸುವುದು)

(ಇ) ಇವೆಲ್ಲವನ್ನೂ ಹೊರತು ಪಡಿಸಿದ ನಂತರವೂ ರಾಜ್ಯ ಪ್ರತಿ ದಿನ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಕೊರತೆಯನ್ನು ಎದುರಿಸುತ್ತಿದೆ ; ರಾಜ್ಯಕ್ಕೆ ಪ್ರತಿದಿನ ಅಗತ್ಯವಿರುವ ವಿದ್ಯುತ್ ಉತ್ಪಾದನೆ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು ; ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸ್ಥಾಪಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು ?

## ಪಿ.ಡಬ್ಲ್ಯೂ.ಡಿ ರಸ್ತೆಯ ಎರಡೂ ಬದಿ ಬಿಡುವ ಜಾಗದ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೦೮೨ (೧೩೬೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಸ್ತೆಗಳ ನಿರ್ವಹಣೆಯ ಬಗ್ಗೆ ಲೋಕೋಪಯೋಗಿ ಇಲಾಖಾ ಮಾನದಂಡವೇನು ;

(ಆ) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ ಹೀಗೆ ಇಲಾಖಾ ರಸ್ತೆಗಳನ್ನು ಮಾಡುವಾಗ ರಸ್ತೆಯ ಮಧ್ಯಭಾಗದಿಂದ ಎಡ ಮತ್ತು ಬಲಭಾಗದಲ್ಲಿ ಜಾಗ ಬಿಡಲು ಇಲಾಖಾ ಮಾನದಂಡವೇನು ;

(ಇ) ನಗರ, ಪಟ್ಟಣಗಳಲ್ಲಿ ಹಾದು ಹೋಗುವ ರಸ್ತೆಗಳ ಅಕ್ಕಪಕ್ಕದಲ್ಲಿ ನಿರ್ಮಾಣ ಮಾಡುವ ಕಟ್ಟಡಗಳಿಗೆ ರಸ್ತೆಯಿಂದ ಬಿಡುವ ಜಾಗವೆಷ್ಟು;

(ಈ) ಬೆಂಗಳೂರು–ಮೈಸೂರು ರಸ್ತೆ ಯಾವ ಹೆದ್ದಾರಿ ಎಂದು ಗುರುತಿಸಲ್ಪಟ್ಟಿದೆ ; ಮುಂದಿನ ದಿನಗಳಲ್ಲಿ ಅಗಲೀಕರಣದಲ್ಲಿ ಮಾರ್ಪಾಟಾಗುವುದೇ ; ಈ ರಸ್ತೆಯ ಎರಡೂ ಬದಿಗಳಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಿಡಬೇಕಾದ ಜಾಗವೆಷ್ಟು ? (ರಸ್ತೆಯ ಮಧ್ಯಭಾಗದಿಂದ)

## ಲಾಲ್‌ಬಾಗ್‌ನಲ್ಲಿ ನಡೆಯುವ ಪ್ರದರ್ಶನಗಳು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೦೮೩ (೧೩೬೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತೋಟಗಾರಿಕೆ ಇಲಾಖೆಯಿಂದ ಲಾಲ್‌ಬಾಗ್‌ನಲ್ಲಿ ನಡೆಯುವ ಇಲಾಖಾ ಪ್ರದರ್ಶನಗಳು ಯಾವುವು ; ವರ್ಷದಲ್ಲಿ ಯಾವ ಸಂದರ್ಭದಲ್ಲಿ ನಡೆಯುತ್ತವೆ ;

(ಆ) ಪ್ರತಿ ಪ್ರದರ್ಶನ ಎಷ್ಟು ದಿನಗಳ ಕಾಲ ನಡೆಯುತ್ತದೆ ;

(ಇ) ಸಾರ್ವಜನಿಕರ ಬೇಡಿಕೆ ಇದ್ದರೂ, ಕಡಿಮೆ ಅವಧಿಯಲ್ಲಿ ನಡೆಸುತ್ತಿರಲು ಕಾರಣ ಏನು ;

(ಈ) ಮುಂದಿನ ದಿನಗಳಲ್ಲಿ ಸಾರ್ವಜನಿಕರ ಬೇಡಿಕೆಗೆ ತಕ್ಕಂತೆ ಹೆಚ್ಚಿನ ದಿನ ಪ್ರದರ್ಶನ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಲೋಕೋಪಯೋಗಿ ಸೇತುವೆಗಳ ದುರಸ್ತಿ ಕಾರ್ಯ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೦೮೪ (೧೩೬೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುರುವೇಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ರಸ್ತೆಗಳಲ್ಲಿ ಹಾಳಾಗಿರುವ ಸೇತುವೆಗಳು ಯಾವುವು ;

(ಆ) ಹಾಗಿದ್ದಲ್ಲಿ, ಈ ವರ್ಷ ದುರಸ್ತಿಗೆ ಕೈಗೆತ್ತಿಕೊಂಡಿರುವ ಸೇತುವೆ ಕಾಮಗಾರಿಗಳು ಯಾವುವು ;

(ಇ) ಸಾರ್ವಜನಿಕರಿಂದ ಬಂದಿರುವ ಬೇಡಿಕೆಗಳು ಯಾವುವು ;

(ಈ) ಇದರಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು ; ಉಳಿದಿರುವ ಸೇತುವೆ ದುರಸ್ತಿ ಕಾಮಗಾರಿಗಳನ್ನು ಯಾವಾಗ ನಿರ್ವಹಿಸಲಾಗುವುದು ?

## ಅಗತ್ಯ ಪ್ರಮಾಣದಷ್ಟು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸುವುದು .

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೦೮೫ (೧೩೬೭) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನಲ್ಲಿ ಟ್ರಾನ್ಸ್-ಫಾರ್ಮರ್‌ಗಳ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ಒಂದು ವರ್ಷದಿಂದ ಟ್ರಾನ್ಸ್‌ಫಾರ್ಮರ್‌ಗಳ ಬೇಡಿಕೆಗಾಗಿ ಬಂದಿರುವ ಅರ್ಜಿಗಳೆಷ್ಟು ; (ಗ್ರಾಮವಾರು ವಿವರ ನೀಡುವುದು)

(ಇ) ಇದರಲ್ಲಿ ಸರ್ಕಾರ ಒದಗಿಸಿರುವ ಟ್ರಾನ್ಸ್‌ಫಾರ್ಮರ್‌ಗಳು ಎಷ್ಟು ;

(ಈ) ಇನ್ನೂ ಬಾಕಿ ನೀಡಬೇಕಾಗಿರುವ ಟ್ರಾನ್ಸ್‌ಫಾರ್ಮರ್‌ಗಳು ಎಷ್ಟು ; ಯಾವಾಗ ನೀಡಲಾಗುವುದು ?

**ಪ್ರತಿ ತಾಲ್ಲೂಕಿನಲ್ಲಿ ಟ್ರಾನ್ಸ್‌ಫಾರ್ಮರ್ ರಿಪೇರಿ ಘಟಕ ಪ್ರಾರಂಭ**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೧೦೮೬ (೧೩೬೩) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಟ್ರಾನ್ಸ್‌ಫಾರ್ಮರ್ ಸಮಸ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ ;

(ಆ) ಸುಟ್ಟಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಲು ಇರುವ ಮಾನದಂಡವೇನು ;

(ಇ) ಪ್ರತಿ ತಾಲ್ಲೂಕಿನಲ್ಲಿಯೂ ಟ್ರಾನ್ಸ್‌ಫಾರ್ಮರ್ ರಿಪೇರಿ ಘಟಕಗಳನ್ನು ತೆರೆದರೆ ರೈತರಿಗೆ ತೊಂದರೆ ತಪ್ಪುವುದಲ್ಲವೆ ;

(ಈ) ಹಾಗಿದ್ದಲ್ಲಿ, ಕೂಡಲೇ ಕ್ರಮ ಕೈಗೊಂಡು ರೈತರಿಗೆ ಅನುಕೂಲ ಮಾಡಲಾಗುವುದೆ ?

## ಕೃಷಿ ಯಂತ್ರೋಪಕರಣ ಯೋಜನೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) –**

೧೦೮೭ (೧೩೭೨) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ "ಕೃಷಿ ಯಾಂತ್ರಿಕರಣ ಯೋಜನೆ" ಜಾರಿಯಲ್ಲಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯಡಿ ವಿತರಿಸಲಾದ ಯಂತ್ರೋಪಕರಣಗಳು ಎಷ್ಟು ; ಅವು ಯಾವುವು ; (ವರ್ಷವಾರು ವಿವರ ನೀಡುವುದು)

(ಇ) ಈ ಯೋಜನೆ ಅಡಿ ಉಫಯೋಗ ಪಡೆದ ಫಲಾನುಭವಿಗಳು ಯಾರು ವಿತರಿಸಲಾದ ಯಂತ್ರೋಪಕರಣಗಳ ಮಾಹಿತಿ ನೀಡುವುದು ; (ವರ್ಷವಾರು ವಿವರ ನೀಡುವುದು)

(ಈ) ಈ ಯಂತ್ರೋಪಕರಣಗಳಿಗೆ ನೀಡಲಾದ ಸಹಾಯಧನವೆಷ್ಟು (ಯಂತ್ರೋಪಕರಣವಾರು, ವರ್ಷವಾರು ವಿವರ ನೀಡುವುದು)?

## ರೈತರ ತೋಟಗಾರಿಕೆ ಉತ್ಪನ್ನಗಳ ಸಂರಕ್ಷಣೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) –**

೧೦೮೮ (೧೩೬೯) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ ರೈತರು ಬೆಳೆದ ತೋಟಗಾರಿಕೆ ಉತ್ಪನ್ನಗಳನ್ನು ಸಂರಕ್ಷಣೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಆ) ಜಿಲ್ಲೆಯಲ್ಲಿ ಎಷ್ಟು ಕಡೆ ಸಂಸ್ಕರಣಾ ಘಟಕ ಮತ್ತು ಶೈತ್ಯಾಗಾರಗಳನ್ನು ಸ್ಥಾಪಿಸಲಾಗಿದೆ ; ಅವುಗಳ ಸಾಮರ್ಥ್ಯ ಎಷ್ಟು ; ಎಲ್ಲೆಲ್ಲಿ ಸ್ಥಾಪಿಸಲಾಗಿದೆ ;

(ಇ) ಜಿಲ್ಲೆಯಲ್ಲಿ ಎಷ್ಟು ಕಡೆ ಇನ್ನೂ ಹೆಚ್ಚಿನ ಸಂಸ್ಕರಣಾ ಘಟಕ ಮತ್ತು ಶೈತ್ಯಾಗಾರವನ್ನು ಸ್ಥಾಪಿಸಲಾಗುವುದು ?

## ನೂತನ ಪುರಸಭೆಗಳ ಘೋಷಣೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೮೯ (೧೩೬೮) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ಕಡೆ ಹೊಸದಾಗಿ ಪುರಸಭೆಗಳನ್ನು ಸರ್ಕಾರ ಘೋಷಿಸಲು ಯೋಚಿಸಿದೆ; ಅವು ಯಾವುವು;

(ಆ) ಈ ಹೊಸ ಪುರಸಭೆಗಳನ್ನು ಯಾವಾಗ ಘೋಷಿಸಲಾಗುತ್ತದೆ;

(ಇ) ಹೊಸ ಪುರಸಭೆಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗುತ್ತದೆ (ಪುರಸಭೆವಾರು ವಿವರ ನೀಡುವುದು)?

## ಗಣಿಗಾರಿಕೆ ಲಾರಿಗಳ ಸಂಚಾರದಿಂದಾಗಿ ಗ್ರಾಮದ ಜನತೆ, ಜಾನುವಾರುಗಳಿಗೆ ತೊಂದರೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೯೮೦ (೧೩೭೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ತಾರಾನಗರ ಗ್ರಾಮದಲ್ಲಿ ಕಬ್ಬಿಣದ ಅದಿರು ಲಾರಿಗಳ ವಿಪರೀತ ಓಡಾಟದಿಂದಾಗಿ ಹಬ್ಬುವ ಧೂಳು ಗ್ರಾಮದ ಜನತೆ ಮತ್ತು ಪ್ರಾಣಿ ಪಕ್ಷಿಗಳು ಸಾಕಷ್ಟು ರೋಗರುಜಿನಗಳಿಗೆ ತುತ್ತಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಲಾರಿಗಳ ಓಡಾಟವನ್ನು ಕಡಿಮೆ ಮಾಡಲು ತಾರಾನಗರ ಗ್ರಾಮದ ಬಳಿ ಬೈಪಾಸ್ ರಸ್ತೆ ನಿರ್ಮಿಸಲಾಗುವುದೇ;

(ಇ) ಈ ಬೈಪಾಸ್ ರಸ್ತೆ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು; ಯಾವ ಕಾಲಮಿತಿಯಲ್ಲಿ ಸಂಪೂರ್ಣಗೊಳಿಸಲಾಗುವುದು;

(ಈ) ಅದಕ್ಕೆ ಬೇಕಾಗುವ ಮೊತ್ತವೆಷ್ಟು?

## ಅಡಿಕೆ ತೋಟಕ್ಕೆ ಬೃಹತ್ ಸಂಖ್ಯೆಯಲ್ಲಿ ನೊಣಗಳ ದಾಳಿ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೯೮೧ (೧೩೭೪) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಿರಸಿ ತಾಲ್ಲೂಕಿನ ಭಾತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿನ ಅಡಿಕೆ ತೋಟಕ್ಕೆ ಭಾರಿ ಪ್ರಮಾಣದ ನೊಣಗಳು (ಸಸ್ಯ ತಿಗಣೆ) ದಾಳಿಯಿಟ್ಟಿರುವುದು ನಿಜವೇ;

(ಆ) ಒಮ್ಮಿಂದೊಮ್ಮೆಲೆ ಈ ರೀತಿ ಏಕಾಏಕಿ ಸಸ್ಯ ತಿಗಣೆಗಳು ಭಾರಿ ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲು ಕಾರಣವೇನು;

(ಇ) ಇವುಗಳಿಂದ ಅಡಿಕೆ ಅಥವಾ ಇನ್ನಿತರ ತೋಟಗಳಿಗೆ ಯಾವ ರೀತಿ ಹಾನಿಯುಂಟಾಗುತ್ತದೆ (ವಿವರಿಸುವುದು);

(ಈ) ಇವುಗಳನ್ನು ನಾಶಪಡಿಸುವ ಮಾರ್ಗವನ್ನು ಕಂಡು ಹಿಡಿಯಲಾಗಿದೆಯೇ (ವಿವರಿಸುವುದು);

(ಉ) ಇವುಗಳಿಂದಾಗಿ ಪ್ರಸ್ತುತ ಸದರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ರೈತರಿಗೆ ಯಾವ ಪ್ರಮಾಣದ ನಷ್ಟವಾಗಿದೆ (ವಿವರಿಸುವುದು)?

## ಬಸ್ ನಿಲ್ದಾಣಗಳಲ್ಲಿ ಹಾಪ್‌ಕಾಮ್ಸ್ ಮಳಿಗೆ ತೆರೆಯುವುದು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೧೦೯೨ (೧೩೭೩) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತೋಟಗಾರಿಕೆ ಇಲಾಖೆಯ ಹಾಪ್‌ಕಾಮ್ಸ್ ಸಂಸ್ಥೆಯ ಹಣ್ಣು ಮತ್ತು ತರಕಾರಿ ಮಾರಾಟ ಮಳಿಗೆಗಳನ್ನು ಬೆಂಗಳೂರು ನಗರ ಹಾಗೂ ಜಿಲ್ಲಾ ಕೇಂದ್ರಗಳಲ್ಲಿನ ಯಾವುದಾದರೂ ವ್ಯಾಪಾರಿ ಮಳಿಗೆಯುಕ್ತ ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಸ್ಥಾಪಿಸಲಾಗಿದೆಯೇ; (ವಿವರ ನೀಡುವುದು)

(ಆ) ಬೆಂಗಳೂರು ನಗರದ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಇಲಾಖೆಯ ಹಣ್ಣು ಮತ್ತು ತರಕಾರಿ ಮಾರಾಟ ಮಳಿಗೆಗಳನ್ನು ಹಾಕಿದಲ್ಲಿ ಅದರಿಂದ ಗ್ರಾಹಕರಿಗೆ ಮತ್ತು ರೈತರಿಗೆ ಹೆಚ್ಚು ಉಪಯೋಗವಾಗುವುದಲ್ಲವೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದೇ?

## ಸುವರ್ಣಸೌಧ ಸಮೀಪದ ರಾಷ್ಟ್ರೀಯ ಹೆದ್ದಾರಿ ಸ್ಥಳಾಂತರ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೯೩ (೧೩೮೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕುಂದಾಪುರದಲ್ಲಿದ್ದ ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯನ್ನು ಶೃಂಗೇರಿಗೆ ಸ್ಥಳಾಂತರ ಮಾಡಿರುವ ಉದ್ದೇಶವೇನು;

(ಆ) ಒಂದು ಪಕ್ಷದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಕಛೇರಿ ಸ್ಥಳಾಂತರ ಮಾಡಿರುವುದೇ ಆದಲ್ಲಿ, ಬೆಳಗಾವಿಯ ಸುವರ್ಣ ಸೌಧದ ಪಕ್ಕದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯನ್ನು ಸುಗಮ ಅಧಿವೇಶನ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಸ್ಥಳಾಂತರ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ ಹೆದ್ದಾರಿ ತಡೆ, ಪ್ರತಿಭಟನೆ, ಧರಣಿಗಳಿಂದಾಗಿ ರಾಷ್ಟ್ರೀಯ ಹೆದ್ದಾರಿ ಪ್ರಯಾಣವು ದುಸ್ತರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

## ಕೃಷಿ ಇಲಾಖಾ ಭೂಮಿಯನ್ನು ಬೇರೆ ಇಲಾಖೆಗೆ ನೀಡಿರುವುದು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೯೪ (೧೩೭೮) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ೧೦ ವರ್ಷಗಳಲ್ಲಿ ಕೃಷಿ ಇಲಾಖೆಯಿಂದ ಎಷ್ಟು ಎಕರೆ ಭೂಮಿಯನ್ನು ಎಷ್ಟು ಅವಧಿಗೆ ಬೇರೆ ಇಲಾಖೆಗೆ ನೀಡಲಾಗಿದೆ; ಹಾಗೂ ಎಷ್ಟು ಎಕರೆ

ಭೂಮಿಯನ್ನು ಬದಲಾವಣೆ ರೂಪದಲ್ಲಿ ಮಾಡಲಾಗಿದೆ (ವರ್ಷವಾರು, ಇಲಾಖೆವಾರು ವಿವರ ನೀಡುವುದು);

(ಆ) ರಾಜ್ಯದಲ್ಲಿ ಕೃಷಿ ಇಲಾಖೆಯ ಭೂಮಿಯನ್ನು ಯಾವುದೇ ಕಾರಣಕ್ಕೂ ಯಾವುದೇ ಉದ್ದೇಶಕ್ಕೂ ಯಾವುದೇ ಇಲಾಖೆಗೆ ವರ್ಗಾವಣೆ, ಪರಾಧೀನ ಮಾಡಬಾರದೆನ್ನುವ ಸರ್ಕಾರದ ನೀತಿ ಇರುವಾಗ ಸದರಿ ಜಿಲ್ಲೆಗಳಲ್ಲಿ ಕೃಷಿ ಇಲಾಖೆಯ ಭೂಮಿಯನ್ನು ಬೇರೆ ಇಲಾಖೆಗಳಿಗೆ ಯಾವ ಯಾವ ವರ್ಷದಲ್ಲಿ ವರ್ಗಾವಣೆ, ಪರಾಧೀನ ಮಾಡಲಾಗಿದೆ (ವರ್ಷವಾರು, ಇಲಾಖೆವಾರು ವಿವರ ನೀಡುವುದು);

(ಇ) ಉಡುಪಿ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ಅಧೀನಕ್ಕೊಳಪಟ್ಟಂತಹ ಬೀಜೋತ್ಪಾದನಾ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ಪಾಠಶಾಲೆ ಇವುಗಳು ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

## ಖಾಸಗಿ ವಿದ್ಯುತ್ ಉತ್ಪಾದನಾ ವಿವಿಧ ಘಟಕಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೮೫೫ (೧೩೮೦) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉಡುಪಿ ಜಿಲ್ಲೆಯಲ್ಲಿರುವ ಖಾಸಗಿ ವಿದ್ಯುತ್ ಉತ್ಪಾದನಾ ವಿವಿಧ ಘಟಕಗಳ ಸಂಖ್ಯೆ ಎಷ್ಟು; ಅವು ಯಾವುವು;

(ಆ) ಕಳೆದ ಮೂರು ವರ್ಷಗಳಲ್ಲಿ ಸದರಿ ಜಿಲ್ಲೆಯಲ್ಲಿರುವ ಖಾಸಗಿ ವಿದ್ಯುತ್ ಉತ್ಪಾದನಾ ವಿವಿಧ ಘಟಕಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಪ್ರಮಾಣವೆಷ್ಟು; (ವರ್ಷವಾರು, ಘಟಕವಾರು ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಈ ಘಟಕಗಳಿಂದ ಸರ್ಕಾರ ಖರೀದಿ ಮಾಡಿದ ವಿದ್ಯುತ್ತಿನ ಪ್ರಮಾಣವೆಷ್ಟು; ವಿದ್ಯುತ್ ಖರೀದಿಗೆ ಪ್ರತಿ ಘಟಕಗಳಿಗೆ ಪಾವತಿಸಲಾದ ಮೊತ್ತವೆಷ್ಟು (ವರ್ಷವಾರು, ಘಟಕವಾರು ವಿವರ ನೀಡುವುದು)?

## ದಕ್ಷಿಣ ಕನ್ನಡ ಕೃಷಿಕರ ಸಹಕಾರ ಮಾರಾಟ ಸಂಘ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೯೬ (೧೩೭೯) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಕೃಷಿಕರ ಸಹಕಾರ ಮಾರಾಟ ಸಂಘ ನಿಯಮಿತ, ಮಂಗಳೂರು, ಈ ಸಂಸ್ಥೆಯು ಯಾವಾಗ ಪ್ರಾರಂಭಗೊಂಡಿತು; ಈ ಸಂಸ್ಥೆಯನ್ನು ಪ್ರಾರಂಭಿಸಿದವರು ಯಾರು; ಯಾವ ಉದ್ದೇಶಗಳಿಗಾಗಿ ಈ ಸಂಸ್ಥೆಯನ್ನು ಪ್ರಾರಂಭಿಸಲಾಯಿತು; ಈ ಸಂಸ್ಥೆಯ ವ್ಯಾಪ್ತಿಗೆ ಎಷ್ಟು ಜಿಲ್ಲೆಗಳು ಒಳಪಟ್ಟಿವೆ;

(ಆ) ಈ ಸಂಸ್ಥೆಯು ಯಾವ ಯಾವ ಪ್ರದೇಶಗಳಲ್ಲಿ ತನ್ನ ಶಾಖೆಯನ್ನು ಹೊಂದಿದೆ; ಯಾವ ಯಾವ ಪ್ರದೇಶಗಳಲ್ಲಿ ಸ್ವಂತ ಸ್ಥಳವನ್ನು ಹೊಂದಿದೆ;

(ಇ) ೯೫ ವರ್ಷಗಳ ಇತಿಹಾಸವನ್ನು ಹೊಂದಿದ ಒಂದು ಕಾಲದಲ್ಲಿ ರಾಜ್ಯದಲ್ಲಿ ಮೂರನೇ ಸ್ಥಾನವನ್ನು ಹೊಂದಿದ ಈ ಸಂಸ್ಥೆಯ ಜಾಗವನ್ನು ಹಾಗೂ ಪ್ರಸ್ತುತ ಈ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ೨೪ ಖಾಯಂ ಸಿಬ್ಬಂದಿಗಳ ರಕ್ಷಣೆ ಮಾಡುವುದು ಸರ್ಕಾರದ ಕನಿಷ್ಠ ಜವಾಬ್ದಾರಿಯಲ್ಲವೇ; ಈ ಬಗ್ಗೆ ಸರ್ಕಾರದ ನಿಲುವೇನು?

## **ಲೋಕೋಪಯೋಗಿ ಇಲಾಖಾ ಗ್ಯಾಂಗ್‌ಮೆನ್‌ಗಳು**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೯೭೭ (೧೩೮೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಲೋಕೋಪಯೋಗಿ ಕಛೇರಿಗಳಲ್ಲಿ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಗ್ಯಾಂಗ್‌ಮೆನ್‌ಗಳ ಸಂಖ್ಯೆ ಎಷ್ಟು; ಇಂದು ಕಾರ್ಯನಿರ್ವಹಿಸುತ್ತಿರುವ ಗ್ಯಾಂಗ್‌ಮೆನ್‌ಗಳ ಸಂಖ್ಯೆ ಎಷ್ಟು; (ವಿಭಾಗವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಗ್ಯಾಂಗ್‌ಮೆನ್‌ಗಳ ಹುದ್ದೆಯನ್ನು ಪುನರ್ ನೇಮಕ ಮಾಡದೇ ಇರತಕ್ಕಂತಹ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯು ರಸ್ತೆಗಳ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗ್ಯಾಂಗ್‌ಮೆನ್‌ಗಳ ಕೊರತೆಯಿಂದ ಲೋಕೋಪಯೋಗಿ ರಸ್ತೆಗಳ ಇಕ್ಕೆಲಗಳಲ್ಲಿನ ಗಿಡಗಂಟಿ ಹಾಗೂ ಪೊದೆಗಳನ್ನು ತೆಗೆಯಲು ಸಾಧ್ಯವಾಗದೆ, ಇದರಿಂದ ಅವಘಡಗಳು ಹೆಚ್ಚಾಗುತ್ತಿರುವುದು ಸರ್ಕಾರ ಗಮನಿಸಿದೆಯೇ; ಇದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ಗ್ಯಾಂಗ್‌ಮೆನ್‌ಗಳು ಇಲ್ಲದೆ ರಸ್ತೆಗಳ ನಿರ್ವಹಣೆಯ ಕನಿಷ್ಠ ಮಾಹಿತಿಯು ಇಲಾಖೆಯ ಅಭಿಯಂತರರಿಗೆ ಸಿಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು?

## ಹಾಸನದ ರಿಂಗ್ ರಸ್ತೆ ಕಾಮಗಾರಿ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೯೮ (೧೩೮೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಾಸನದ ರಿಂಗ್ ರಸ್ತೆಯ ಹಳೇಬೀಡು ರಸ್ತೆಯಿಂದ ಬೇಲೂರು ರಸ್ತೆವರೆಗೆ ೩.೧೮ ಕಿ.ಮೀ.ನಿಂದ ೫.೨೫ ಕಿ.ಮೀ. ವರೆಗೆ ಜಲ್ಲಿ ಮೇಲ್ಮೈ ಇದ್ದು, ಅಡಚಣೆ ರಹಿತ ಭೂಮಿ ಲಭ್ಯವಿದ್ದು ಇದರ ಅಭಿವೃದ್ಧಿಗೆ ಬಿಡುಗಡೆ ಮಾಡಿರುವ ಮೊಬಲಗೆಷ್ಟು;

(ಆ) ೫.೨೫ ಕಿ.ಮೀ. ಇಂದ ೭.೦೦ ಕಿ.ಮೀ. ವರೆಗೆ ಬೇಲೂರು ರಸ್ತೆವರೆಗೆ ೧೩ ಎಕರೆ ೩೯ ೧/೪ ಗುಂಟೆ ಖಾಸಗಿ ಪ್ರದೇಶವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಕೈಗೊಂಡಿರುವ ಕ್ರಮಗಳೇನು;

(ಇ) ೭.೦೦ ಕಿ.ಮೀ.ನಿಂದ ೭.೮೦ ಕಿ.ಮೀ. ವರೆಗೆ ೦.೮೦ ಕಿ.ಮೀ. ಭಾಗವು ರಾಜ್ಯ ಹೆದ್ದಾರಿ-೫೭ರ ಭಾಗಶಃ ಭಾಗವಾಗಿದ್ದು, ಈ ರಸ್ತೆಗೆ ಜಲ್ಲಿ ಕೂಡಾ ಹಾಕಿರುವುದಿಲ್ಲ. ಆದರೆ, ಸಾರ್ವಜನಿಕ ಬಳಕೆಯಲ್ಲಿದ್ದು, ಇದನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳೇನು;

(ಈ) ಸದರಿ ರಿಂಗ್ ರಸ್ತೆ ಅಭಿವೃದ್ಧಿಪಡಿಸಲು ಭೂಸ್ವಾಧೀನ ಪ್ರಕ್ರಿಯೆಗೆ ಮತ್ತು ರಸ್ತೆ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆಯೇ?

## ಸಿ.ಎಂ.ಎಸ್. ಮತ್ತು ಎಂ.ಟಿ.ಡಿ.ಪಿ. ಯೋಜನೆಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೦೯೯ (೧೩೭೭) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಪ್ಪಳ ಜಿಲ್ಲೆಯಲ್ಲಿ ಸಿ.ಎಂ.ಎಸ್. ಮತ್ತು ಎಂ.ಟಿ.ಡಿ.ಪಿ. ಯೋಜನೆಯಲ್ಲಿ ೨೦೧೨-೧೩ರಿಂದ ಪ್ರಸಕ್ತ ಸಾಲಿನವರೆಗೂ ಮಂಜೂರಾದ ಅನುದಾನ ಸ್ವೀಕೃತವಾಗಿದೆಯೇ (ವಿವರಗಳನ್ನು ತಾಲ್ಲೂಕುವಾರು ನೀಡುವುದು);

(ಆ) ಸದರಿ ಯೋಜನೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಇದುವರೆಗೂ ಕೈಗೊಳ್ಳಲಾಗಿದೆ (ವಿವರಗಳನ್ನು ನೀಡುವುದು);

(ಇ) ಈ ಯೋಜನೆಯಲ್ಲಿ ಯಾವ ತರಹದ ಕಾಮಗಾರಿಗಳನ್ನು ಅಳವಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ;

(ಈ) ಕೈಗೊಂಡ ಕಾಮಗಾರಿಗಳ ಸದ್ಯದ ಪ್ರಗತಿ ಏನಿದೆ (ಮಾಹಿತಿಯನ್ನು ನೀಡುವುದು);

(ಉ) ವಿಳಂಬಕ್ಕೆ ಕಾರಣಗಳೇನು?

## ಕೃಷಿ ಮಹಾವಿದ್ಯಾಲಯ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೧೦೦ (೧೩೭೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಕೃಷಿ ಮಹಾವಿದ್ಯಾಲಯ ಮಂಜೂರಾಗಿದ್ದು ಯಾವಾಗ;

(ಆ) ಸದ್ಯ ಈ ವಿಷಯ ಯಾವ ಹಂತದಲ್ಲಿದೆ;

(ಇ) ಇದಕ್ಕಾಗಿ ಅಗತ್ಯ ಅನುದಾನ ಮಂಜೂರು ಮಾಡಲಾಗಿದೆ; ಮಾಡಿದ್ದಲ್ಲಿ, ವಿವರಗಳನ್ನು ನೀಡುವುದು;

(ಈ) ಸದ್ಯ ಮಂಜೂರಾಗಿರುವ ಅನುದಾನದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಿರುವರೇ; ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳೇನು?

## ನಗರೋತ್ಥಾನ ಯೋಜನೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** :-

೧೧೦೧ (೧೩.೭.೫) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಪ್ಪಳ ಜಿಲ್ಲೆಗೆ ನಗರೋತ್ಥಾನ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಂಜೂರು ಮಾಡಲಾದ ಅನುದಾನ ಎಷ್ಟು;

(ಆ) ಕಾಮಗಾರಿಗಳ ಅನುಷ್ಠಾನಕ್ಕಾಗಿ ಯಾವ ಗುತ್ತಿಗೆಯನ್ನು/ಏಜೆನ್ಸಿಯನ್ನು ನೇಮಕ ಮಾಡಲಾಗಿದೆ;

(ಇ) ಗುತ್ತಿಗೆ ಕರಾರಿನನ್ವಯ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಸೂಚಿಸಿದ ದಿನಾಂಕಗಳನ್ನು ಕಾಮಗಾರಿವಾರು ನೀಡುವುದು;

(ಈ) ಸದರಿ ಕಾಮಗಾರಿಗಳು ಸದ್ಯ ಯಾವ ಹಂತದಲ್ಲಿವೆ; ಅಪೂರ್ಣಗೊಂಡ ಕಾಮಗಾರಿಗಳು ಯಾವುವು; ಕಾಮಗಾರಿ ಅಪೂರ್ಣಗೊಳ್ಳಲು ಕಾರಣಗಳೇನು?

## ಹೈದರಾಬಾದ್ ಕರ್ನಾಟಕ ಭಾಗದ ಸಕ್ಕರೆ ಕಾರ್ಖಾನೆಗಳು

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ) :–**

೧೧೦೨ (೧೩೫೮) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್ ಕರ್ನಾಟಕ ಭಾಗದಲ್ಲಿ ಇರುವ ಸಕ್ಕರೆ ಕಾರ್ಖಾನೆಗಳು ಎಷ್ಟು; ಸರ್ಕಾರವು ಪ್ರತಿ ಟನ್ ಕಬ್ಬಿಗೆ ನಿಗದಿಪಡಿಸಿದ ದರದಂತೆ ಕಬ್ಬು ಬೆಳೆಗಾರರಿಗೆ ಹಣ ಪಾವತಿಸಲಾಗಿದೆಯೇ; ಇಲ್ಲಿಯವರೆಗೆ ರೈತರಿಗೆ ಪಾವತಿಸಿದ ಮತ್ತು ಪಾವತಿಸಬೇಕಾದ ಹಣವೆಷ್ಟು (ಕಾರ್ಖಾನೆವಾರು ವಿವರ ನೀಡುವುದು);

(ಆ) ಸರ್ಕಾರದ ಆದೇಶ ಉಲ್ಲಂಘನೆ ಮಾಡಿರುವ ಸಕ್ಕರೆ ಕಾರ್ಖಾನೆಗಳೆಷ್ಟು; ಅಂತಹ ಕಾರ್ಖಾನೆಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಇ) ಸರ್ಕಾರ ಮತ್ತು ಕಾರ್ಖಾನೆಗಳ ಸಾಮರಸ್ಯದ ಕೊರತೆಯಿಂದ ರೈತರು ವಿನಾ:ಕಾರಣ ಬಲಿಪಶುಯಾಗುತ್ತಿದ್ದು, ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸರ್ಕಾರದ ಮುಂದಿರುವ ಕ್ರಮಗಳೇನು (ವಿವರ ನೀಡುವುದು)?

## ನಗರ ಸಭೆಯನ್ನು ಉನ್ನತೀಕರಣ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೧೦೩ (೧೩೩೩) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಾದ ಚಿಕ್ಕ ಮಂಡ್ಯ, ಇಂಡುವಾಳು, ಕ್ಯಾತುಂಗೆರೆ, ಕಿರಗಂದೂರು

ಗ್ರಾಮಗಳನ್ನು ಸೇರಿಸಿಕೊಂಡು ಮಹಾನಗರ ಪಾಲಿಕೆಯನ್ನಾಗಿ ಉನ್ನತೀಕರಿಸುವ ಬಗ್ಗೆ ಸರ್ಕಾರದ ಗಮನದಲ್ಲಿದೆಯೇ;

(ಆ) ಇದ್ದಲ್ಲಿ, ಜನಸಂಖ್ಯೆ ಹೆಚ್ಚಾಗಿ, ಬಡಾವಣೆಗಳು ಹೆಚ್ಚಾಗುತ್ತಿರುವುದರಿಂದ ಮಹಾನಗರ ಪಾಲಿಕೆಯನ್ನು ಉನ್ನತೀಕರಿಸಲು ಸರ್ಕಾರಕ್ಕಿರುವ ತೊಂದರೆಗಳೇನು (ಪೂರ್ಣ ಮಾಹಿತಿ ನೀಡುವುದು)?

## ಬೆಂಗಳೂರು ರಾಜರಾಜೇಶ್ವರಿನಗರದ ಕಮಾನಿನ ಎದುರು ರಸ್ತೆ ಅಭಿವೃದ್ಧಿ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೧೦೪ (೧೩೬೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯಲ್ಲಿರುವ ರಾಜರಾಜೇಶ್ವರಿನಗರ ಕಮಾನಿನ (Arch) ಎದುರು ಭಾಗದ ರಸ್ತೆಯು ತುಂಬ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು; (ಪೂರ್ಣ ಮಾಹಿತಿ ನೀಡುವುದು)

(ಇ) ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಪ್ರಸ್ತುತ ವರ್ಷದಲ್ಲಿ ಹಣ ಬಿಡುಗಡೆ ಮಾಡಲಾಗಿದೆಯೇ; ಬಿಡುಗಡೆ ಮಾಡಿದ್ದರೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು)?

## ರಸ್ತೆಯ ಅಭಿವೃದ್ಧಿ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೧೦೫ (೧೩೩೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಜಿಲ್ಲೆ, ಮದ್ದೂರು ತಾ., ಕೆ.ಎಂ.ದೊಡ್ಡಿಯಿಂದ ಮಂಡ್ಯದವರೆಗೆ ಹೋಗುವ ರಸ್ತೆ ತುಂಬಾ ಹಾಳಾಗಿದ್ದು, ಜನ ಜಾನುವಾರು, ವಾಹನಗಳು ಓಡಾಡಲು ಸಾಧ್ಯವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಹಾಗೂ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕಿರುವ ತೊಂದರೆಗಳೇನು (ಪೂರ್ಣ ಮಾಹಿತಿಯನ್ನು ನೀಡುವುದು)?

## ಕೃಷಿ ಇಲಾಖೆಯಿಂದ ರೈತರಿಗೆ ನೇಗಿಲು

**ಡಾ॥ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೧೦೬ (೧೩೨೬) ಮಾನ್ಯ ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರೈತರಿಗೆ ಡಿಸೆಂಬರ್ ತಿಂಗಳಲ್ಲಿ ಕೃಷಿ ಇಲಾಖೆಯಿಂದ ನೇಗಿಲು ನೀಡುತ್ತಿದ್ದು, ಜೂನ್ ತಿಂಗಳಲ್ಲಿ ನೇಗಿಲು ನೀಡಿದ್ದರೆ, ಅನುಕೂಲವಾಗುತ್ತದೆ. ಈ ಬಗ್ಗೆ ಇಲಾಖೆಯ ನಿಲುವನ್ನು ತಿಳಿಸುವುದು;

(ಆ) ರೈತರ ಅನುಕೂಲಕೋಸ್ಕರ ಕೃಷಿ ಇಲಾಖೆಯಿಂದ ಹೊಸದಾಗಿ ರೂಪಿಸಿರುವ ಯೋಜನೆಗಳೇನಾದರೂ ಇದ್ದರೆ ವಿವರ ನೀಡುವುದು;

(ಇ) ವ್ಯವಸಾಯಕ್ಕೆ ಬಳಸುವ ಯಾವ ಯಾವ ಉಪಕರಣಗಳಿಗೆ ಕೃಷಿ ಇಲಾಖೆಯಿಂದ ಸಬ್ಸಿಡಿ ನೀಡಲಾಗುತ್ತಿದೆ (ವಿವರ ನೀಡುವುದು)?

## ಬೀದಿ ಬದಿಯ ವ್ಯಾಪಾರಿಗಳು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :-**

೧೧೦೭ (೧೩೮೫) ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದಿ ಬದಿಗಳಲ್ಲಿ, ತಳ್ಳುವ ಗಾಡಿಗಳ ಮೂಲಕ ರಸ್ತೆಗಳಲ್ಲಿ ಹೂ, ಹಣ್ಣು ತರಕಾರಿ ಇತ್ಯಾದಿಗಳನ್ನು ಮಾರಾಟ ಮಾಡುವ ವ್ಯಾಪಾರಿಗಳನ್ನು ಸರ್ಕಾರ ಗಣತಿ ಮಾಡಿದೆಯೇ ಅಥವಾ ಗುರುತಿಸಿದೆಯೇ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿರುವ ಆ ವ್ಯಾಪಾರಿಗಳೆಷ್ಟು (ಮಹಿಳೆಯರು/ಪುರುಷರು ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು);

(ಇ) ಈ ವ್ಯಾಪಾರಿಗಳಿಗೆ ಸರ್ಕಾರದ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳು ಮಾಮೂಲು ವಸೂಲು ಮಾಡುವುದು; ಪೊಲೀಸರು ಕಿರುಕುಳ ನೀಡುವುದು; ಮೀಟರ್ ಬಡ್ಡಿ ವ್ಯಾಪಾರಗಾರರು ಚಿತ್ರಹಿಂಸೆಗಳನ್ನು ನೀಡುವುದು; ಇನ್ನಿತರ ಶೋಷಣೆಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ, ಈ ವಿಷಯಗಳ ಜೊತೆಗೆ ಈ ವ್ಯಾಪಾರಿಗಳ ಕಲ್ಯಾಣ, ರಕ್ಷಣೆ, ಬೇಡಿಕೆಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59/ಕಾ.ಸೂ. 03379/1000 ಪ್ರತಿಗಳು/10-07-2014